## ಬಿ ಅಂತಿಮ ವರದಿಯ ಮೇಲಿನ ಆದೇಶ

ಬೆಂಗಳೂರಿನ ರಾಜಾಜಿನಗರ ಆರಕ್ಷಕ ಠಾಣೆಯ ಆರಕ್ಷಕ ನಿರೀಕ್ಷಕರು, ಫಿರ್ಯಾದಿಯು ಗ್ರಾಹಕರ ವೇದಿಕೆಯಲ್ಲಿ ಪರಿಹಾರ ಕಂಡುಕೊಳ್ಳಬಹುದೆಂದು, ಆದುದರಿಂದ ಬಿ ಅಂತಿಮ ವರದಿಯನ್ನು ಸಲ್ಲಿಸಿರುವುದಾಗಿ ಹೇಳಿದ್ದಾರೆ.

2. ಫಿರ್ಯಾದಿಯ ಪರ ವಕೀಲರು ಬಿ ಅಂತಿಮ ವರದಿಗೆ ಸಲ್ಲಿಸಿರುವ ತಕರಾರಿನಲ್ಲಿ ದೂರಿನಲ್ಲಿಯ ಸಂಗತಿಗಳನ್ನೆ ಪುನರಾವರ್ತಿಸಿ, ಬಿ ಅಂತಿಮ ವರದಿಯನ್ನು ತಿರಸ್ಕರಿಸಬೇಕೆಂದು ವಿನಂತಿಸಿದ್ದಾರೆ.

3. ಫಿರ್ಯಾದಿಯ ಪರ ವಕೀಲರು ತಮ್ಮ ವಾದದಲ್ಲಿ ದೂರಿನಲ್ಲಿಯ ಸಂಗತಿಗಳನ್ನೆ ಪುನರಾವರ್ತಿಸಿದ್ದಾರೆ.

4. ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿದ ಅಂಶವೆಂದರೇ

**ಬಿ ಅಂತಿಮ ವರದಿಯನ್ನು ತಿರಸ್ಕರಿಸಲು ಸೂಕ್ತವಾದ ಮತ್ತು ಸಮಂಜಸವಾದ ಕಾರಣಗಳಿವೆಯೇ?**

5. ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ ಮೇಲೆ, ಮೇಲಿನ ಅಂಶಕ್ಕೆ ಕೆಳಗಿನ ಕಾರಣಗಳಿಂದ **ಸಕಾರಾತ್ಮಕವಾಗಿ** ಉತ್ತರಿಸಲಾಗಿದೆ.

## ಕಾರಣಗಳು

6. ಫಿರ್ಯಾದಿಯು ಆರೋಪಿತರಿಂದ ದಿನಾಂಕ 28.12.2017 ರಂದು Elite Asta (O) 1.4 CRD i ಕಾರನ್ನು 10,77,399/- ರೂಪಾಯಿಗಳಿಗೆ ಖರೀದಿಸಿದ್ದಾಗಿ, ಆ ಸಮಯದಲ್ಲಿ ಫಿರ್ಯಾದಿ ಕೇಳದೆ ಇದ್ದರೂ ಸಹ ಆರ್ ಟಿ ಓ ಅವರಿಂದ ವಿಶೇಷ ಸಂಖ್ಯೆಗಾಗಿ 3,000/- ರೂಪಾಯಿಗಳನ್ನು ಹೆಚ್ಚುವರಿಯಾಗಿ, ವಿಮೆ ಮೊತ್ತವೆಂದು 16,968/- ರೂಪಾಯಿಗಳನ್ನು, ವಾರೆಂಟಿ ವಿಸ್ತರಣೆಗೆಂದು 9,593/- ರೂಪಾಯಿಗಳನ್ನು ಪಡೆದರೆಂದು, ಈ ಸಂಗತಿಗಳ ಬಗ್ಗೆ ಫಿರ್ಯಾದಿ ಕೇಳಿದಾಗ ಅದನ್ನು

ಮರುಪಾವತಿಸುವುದಾಗಿ ಹೇಳಿ ಕೇವಲ 13,194/- ರೂಪಾಯಿಗಳ ಚೆಕ್ಕನ್ನು ಕಳಿಸಿದರೆಂದು, ಆದುದರಿಂದ ಆರೋಪಿತರು ನಂಬಿಕೆ ದ್ರೋಹ ಮತ್ತು ವಂಚನೆ ಮಾಡಿದರೆಂದು ದೂರಿನಲ್ಲಿ ಆಪಾದಿಸಲಾಗಿದೆ.

7. ಈ ಪ್ರಕರಣವನ್ನು ಸ್ವೀಕರಿಸಿದ ಮೇಲೆ ರಾಜಾಜಿನಗರ ಆರಕ್ಷಕ ಠಾಣೆಯ ಆರಕ್ಷಕ ಉಪ ನಿರೀಕ್ಷಕರಿಗೆ ತನಿಖೆ ಮಾಡಲು ಆದೇಶಿಸಲಾಗಿತ್ತು. ಫಿರ್ಯಾದಿ ಗ್ರಾಹಕರ ವೇದಿಕೆಯಲ್ಲಿ ಪರಿಹಾರ ಕಂಡುಕೊಳ್ಳಬಹುದೆಂದು ಆದುದರಿಂದ ಬಿ ಅಂತಿಮ ವರದಿಯನ್ನು ಸಲ್ಲಿಸಿರುವುದಾಗಿ ಹೇಳಿದ್ದಾರೆ.

8. ಬಿ ಅಂತಿಮ ವರದಿಗೆ ಫಿರ್ಯಾದಿಯು ತನ್ನ ವಕೀಲರ ಮೂಲಕ ಆಕ್ಷೇಪಣಾ ಮನವಿಯನ್ನು ಸಲ್ಲಿಸಿದ್ದು, ದೂರಿನಲ್ಲಿಯ ಸಂಗತಿಗಳನ್ನೇ ಪುನರಾವರ್ತಿಸಿದ್ದಾರೆ.

9. ಫಿರ್ಯಾದಿ ಗ್ರಾಹಕರ ವೇದಿಕೆಯಲ್ಲಿ ಪರಿಹಾರ ಕಂಡುಕೊಳ್ಳಬಹುದೆಂದು ಆದುದರಿಂದ ಬಿ ಅಂತಿಮ ವರದಿಯನ್ನು ಸಲ್ಲಿಸಿರುವುದಾಗಿ ಹೇಳಿದ್ದಾರೆ. ಆದರೆ ಆರೋಪಿತರು ದೂರಿನಲ್ಲಿ ಆಪಾದಿಸಿರುವಂತೆ ಫಿರ್ಯದಿಯಿಂದ ಹೆಚ್ಚಿನ ಹಣ ಪಡೆದಿರುವರೇ ಅಥವಾ ಇಲ್ಲವೇ ಎನ್ನುವ ಸಂಗತಿಗಳ ಕುರಿತು ತನಿಖೆ ಮಾಡಿರುವುದು ಕಂಡುಬರುವುದಿಲ್ಲ. ದೂರು, ಆಕ್ಷೇಪಣಾ ಮನವಿ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ಆರೋಪಿತರು ಮೇಲ್ನೋಟಕ್ಕೆ ಭಾರತೀಯ ದಂಡ ಸಂಹಿತೆ ಕಲಂ 403 ಮತ್ತು 420 ಅಪರಾಧಗಳ ಅಡಿಯಲ್ಲಿ ಅಪರಾಧವೆಸಗಿರುವರೆಂದು ಸದರಿ ಆಪಾದನೆಗಳ ಮೇಲೆ ಸಂಜ್ಞೆಯನ್ನು ತೆಗೆದುಕೊಳ್ಳುವುದು ಸೂಕ್ತವೆಂದು ಕಂಡುಬರುತ್ತದೆ. ಆದರೆ ಉಳಿದ ಆಪಾದನೆಗಳ ಮೇಲೆ ಸಂಜ್ಞೆಯನ್ನು ತೆಗೆದುಕೊಳ್ಳುವಂತೆ ಯಾವುದೇ ಸಂಗತಿಗಳು ಕಂಡುಬರುವುದಿಲ್ಲ. ಆದುದರಿಂದ ಬಿ ಅಂತಿಮ ವರದಿಯನ್ನು ತಿರಸ್ಕರಿಸಿ, ಫಿರ್ಯಾದಿಗೆ ಪ್ರಮಾಣ ಪೂರ್ವಕ ಹೇಳಿಕೆ ನೀಡಲು ಅವಕಾಶ ಕೊಟ್ಟಲ್ಲಿ ಪ್ರಕರಣದಲ್ಲಿ ಆರೋಪಿಗೆ ಸಮನ್ಸ್ ನೀಡಬಹುದೇ ಅಥವಾ ದೂರನ್ನು ವಜಾ ಮಾಡಬಹುದೇ ಎಂದು ತೀರ್ಮಾನಿಸಬಹುದು. ಈ ಎಲ್ಲಾ ಕಾರಣಗಳಿಂದ ಮೇಲಿನ ಅಂಶಕ್ಕೆ **ಸಕಾರಾತ್ಮಕವಾಗಿ** ಉತ್ತರಿಸಿ ಕೆಳಗಿನಂತೆ ಆದೇಶಿಸಿದೆ.

# ಆದೇಶ

ಬೆಂಗಳೂರಿನ ರಾಜಾಜಿನಗರ ಆರಕ್ಷಕ ಠಾಣೆಯ ಆರಕ್ಷಕ ನಿರೀಕ್ಷಕರು ಸಲ್ಲಿಸಿರುವ ಬಿ ಅಂತಿಮ ವರದಿಯನ್ನು ತಿರಸ್ಕರಿಸಲಾಗಿದೆ.

ಭಾರತೀಯ ದಂಡ ಸಂಹಿತೆ ಕಲಂ 406 ಮತ್ತು 420 ಅಪರಾಧಗಳ ಅಡಿಯಲ್ಲಿ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು.

ಫಿರ್ಯಾದಿ ಮತ್ತು ಅವರ ಸಾಕ್ಷಿದಾರರ ಪ್ರಮಾಣ ಪೂರ್ವಕ ಹೇಳಿಕೆ ನೀಡಲು ಅನುಮತಿ ನೀಡಲಾಗಿದೆ.

ಫಿರ್ಯಾದಿ ಮತ್ತು ಅವರ ಸಾಕ್ಷಿದಾರರ ಪ್ರಮಾಣ ಪೂರ್ವಕ ಹೇಳಿಕೆ ನೀಡಲು ಪ್ರಕರಣವನ್ನು ದಿನಾಂಕ 13.01.2023 ಕ್ಕೆ ಮುಂದೂಡಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕ ಯಂತ್ರದ ಮೂಲಕ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿ ನಂತರ ತಪ್ಪುಗಳನ್ನು ತಿದ್ದಿ ಸರಿಪಡಿಸಿ, ಸಹಿ ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ದಿನಾಂಕಃ15.12.2022 ರಂದು ಘೋಷಿಸಿರುತ್ತೇನೆ.)

3 ನೇ ಎಸಿಎಂಎಂ ನ್ಯಾಯಾಲಯ,
ಬೆಂಗಳೂರು.